## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 651
2. ಸದಸ್ಯರ ಹೆಸರು : ಶ್ರೀ . ಎನ್. ರವಿಕುಮಾರ್
3. ಉತ್ತರಿಸಬೇಕಾದ ದಿನಾಂಕ : 21.08.2026.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬಾದಾಮಿ ತಾಲ್ಲೂಕಿನ ಕಂದೂರು ಕೆರೆಗೆ ಮಲಪ್ರಭಾ ಕಾಲುವೆಯಿಂದ ನೀರು ತರಲು ಇದುವರೆಗೆ ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ; (ವಿವರ ನೀಡುವುದು) | ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲ್ಲೂಕಿನ ನಂದಿಕೇಶ್ವರ ಗ್ರಾಮದ ಹತ್ತಿರ ಮಲಪ್ರಭಾ ನದಿಯಿಂದ ಏತ ನೀರಾವರಿ ಮೂಲಕ ಕೆಂದೂರ ಕೆರೆಗೆ ನೀರು ತುಂಬಿಸುವ ಕಾಮಗಾರಿಯನ್ನು ರೂ.500.00 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿ – ದಿನಾಂಕ:07.04.2022 ರಂದು ಲೋಕಾರ್ಪಣೆ ಮಾಡಲಾಗಿರುತ್ತದೆ.<br><br>ಈ ಯೋಜನೆಗೆ ಇದುವರೆಗೆ ರೂ.539.21 ಲಕ್ಷ ವೆಚ್ಚ ಮಾಡಲಾಗಿರುತ್ತದೆ. |
| ಆ | ಬಾದಾಮಿ ತಾಲ್ಲೂಕಿನ ಕಂದೂರು ಕೆರೆಯು ಸುಮಾರು 164 ಎಕರೆ ವಿಸ್ತೀರ್ಣ ಹೊಂದಿದ್ದು, ಪ್ರಸ್ತುತ ಎಷ್ಟು ಎಕರೆ ಪ್ರದೇಶದಲ್ಲಿ ಕೆರೆ ಇದೆ; ಎಷ್ಟು ಎಕರೆ ಒತ್ತುವರಿಯಾಗಿದೆ; (ವಿವರ ನೀಡುವುದು) | ಬಾದಾಮಿ ತಾಲ್ಲೂಕಿನ ಕೆಂದೂರ ಕೆರೆಯ ವಿಸ್ತೀರ್ಣ 164 ಎಕರೆ 16 ಗುಂಟೆ ಇದ್ದು, ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಇರುತ್ತದೆ. ಸದರಿ ಕೆರೆಯಲ್ಲಿ ಯಾವುದೇ ಒತ್ತುವರಿ ಇರುವುದಿಲ್ಲ. |
| ಇ | ನೀರಿಲ್ಲದ ಕೆರೆಗೆ 12.53 ಕೋಟಿ ವೆಚ್ಚ ಮಾಡಿರುವ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ಕ್ರಮಾಂಕ (ಅ) ರಲ್ಲಿ ತಿಳಿಸಿರುವಂತೆ, ರೂ. 539.21 ಲಕ್ಷ ವೆಚ್ಚ ಮಾಡಲಾಗಿರುತ್ತದೆ.<br><br>ಬಾದಾಮಿ ತಾಲೂಕಿನ ಕೆಂದೂರ ಕೆರೆ ಪುರಾತನ ಕೆರೆಯಾಗಿದ್ದು, ಒಟ್ಟು ಶೇಖರಣಾ ಸಾಮರ್ಥ್ಯ 30.00 ಎಂ.ಸಿ.ಎಫ್.ಟಿ ಹೊಂದಿದ್ದು, ಸದರಿ ಕೆರೆಯಿಂದ 182.00 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಈ ಕೆರೆಯಲ್ಲಿ 2004 ರಿಂದ 2015 ರವರೆಗಿನ ಅವಧಿಯಲ್ಲಿ 2008-09 ನೇ ಸಾಲಿನಲ್ಲಿ ಮಾತ್ರ ಕೋಡಿ ಮೇಲೆ ನೀರು ಹರಿದಿರುತ್ತದೆ. ಕಾರಣ, ಕೆರೆಯಲ್ಲಿ ನೀರನ್ನು ಸಂಗ್ರಹಿಸಿ ಅಂತರ್ಜಲ ಮಟ್ಟ ಹೆಚ್ಚಿಸುವ ಉದ್ದೇಶದಿಂದ ಮಲಪ್ರಭಾ ನದಿಯಿಂದ ಏತ ನೀರಾವರಿ ಮೂಲಕ ನೀರು ತುಂಬಿಸಲು ಯೋಜಿಸಿ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ. |

ಕಡತಸಂಖ್ಯೆ: MID/74/LCQ/2026

(ಡಾ. ಅಜಯ್ ಧರ್ಮ ಸಿಂಗ್)
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.